೧. ॥ ಬಾರೆ ಭಾಗ್ಯದ ನಿಧಿಯೆ ॥

॥ಪ॥ ಬಾರೆ ಭಾಗ್ಯದ ನಿಧಿಯೆ
ಕರವೀರನಿವಾಸಿನಿ ಸಿರಿಯೆ।
ಬಾರೆ ಬಾರೆ ಕರವೀರ ನಿವಾಸಿನಿ
ಬಾರಿ ಬಾರಿಗೂ ಶುಭ ಕೋರು ನಮ್ಮ ಮನಿಗೆ

ಲೋಕ ಮಾತೆಯು ನೀನು
ನಿನ್ನ ತೋಕಳಲ್ಲವೇ ನಾನು
ಆಕಳು ಕರುವನು ಸ್ವೀಕರಿಸುವ ಪರಿ
ನೀ ಕರುಣದಿ ಕಾಲ್ ಹಾಕು ನಮ್ಮ ಮನಿಗೆ

ನಿಗಮ ವಂದಿತೆ ನೀನು
ನಿನ್ನ ಪೊಗಳಲಪ್ಪನೆ ನಾನು
ಮಗನಪರಾಧವ ಕ್ಷಮಿಸು ಎಂದೆನುತಲಿ
ನೀ ಲಗುಬಗೆಯಿಂದ ಕಾಲ್ ಹಾಕು ನಮ್ಮ ಮನಿಗೆ

ಕಡೆಗೂ ನಮ್ಮನೆ ವಾಸ
ಒಡೆಯ ಅನಂತಧೀಶ
ಒಡೆಯನಿದ್ದಲ್ಲಿಗೆ ಮಡದಿ ತಾ ಬರುವುದು
ರೂಢಿಗುಚಿತವಿದು ನಡೆ ನಮ್ಮ ಮನಿಗೆ

೨. ॥ ಶರಣು ಸಿದ್ಧಿವಿನಾಯಕ ॥

ಶರಣು ಸಿದ್ಧಿವಿನಾಯಕ ಶರಣು ಬುದ್ಧಿ ಪ್ರದಾಯಕ
ಶರಣು ಪಾರ್ವತಿ ತನಯ ಮೂರುತಿ
ಶರಣು ಮೂಷಿಕ ವಾಹನ
ಶರಣು ಶರಣು

ನಿಟಿಲ ನೇತ್ರನೆ ದೇವಿ ಸುತನೆ
ನಾಗಭೂಷಣ ಪ್ರೀಯನೆ
ತಟಿಲತಾಂಕಿತ ಕೋಮಲಾಂಗನೆ
ಕರ್ಣ ಕುಂಡಲಧಾರನೆ

ಬಟ್ಟ ಮುತ್ತಿನ ಪದಕ ಹಾರನೆ
ಬಾಹು ಹಸ್ತ ಚತುಷ್ಟನೆ
ಇಟ್ಟ ತೊಡುಗೆಯ ಹೇಮಕಂಕಣ
ಪಾಶ ಅಂಕುಶ ಧಾರನೆ

ಕುಕ್ಷಿ ಮಹಾಲಂಬೋದರನೆ
ಇಕ್ಷು ಚಾಪನ ಗೆಲಿದನೆ
ಪಕ್ಷಿವಾಹನ ಸಿರಿಪುರಂದರ
ವಿಠಲನ ನಿಜ ದಾಸನೆ